ನಿರ್ಮಾಣವಾಗಿದ್ದರೂ ಕೂಡ ಕಾನೂನು ಸುವ್ಯವಸ್ಥೆ ಇಲ್ಲ, ಹಾಗಾಗಿ ನೇಮಕಾತಿ ತಡವಾಗುತ್ತಿದೆ ಎನ್ನುವಂತಹ ಬೇಜವಾಬ್ದಾರಿ ಉತ್ತರವನ್ನು ಸದನಕ್ಕೆ ಕೊಡುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಪಿ.ಜಿ.ಆರ್ ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುವಾಗ ಮಾನ್ಯ ಮಂತ್ರಿಗಳು ಬೇಜವಾಬ್ದಾರಿಯಿಂದ ಉತ್ತರ ಕೊಡುತ್ತಿದ್ದಾರೆ ಎಂದು ಏನು ಹೇಳಿದ್ದಾರೆ, ಅದು ಇವರ ತಿಳುವಳಿಕೆ ಕಡಿಮೆ ಎಂದು ನಾನು ಹೇಳಬೇಕಾಗುತ್ತದೆ. ನಾನು ಕೊಟ್ಟಿರತಕ್ಕಂಥ ಉತ್ತರವನ್ನು ಅವರು ಸರಿಯಾಗಿ ಓದಿ ಅರ್ಥಮಾಡಿಕೊಂಡರೆ ಬಹುಶಃ ಈ ಪ್ರಶ್ನೆಯನ್ನು ಅವರು ಕೇಳುತ್ತಾ ಇರಲಿಲ್ಲ.

ಮಾನ್ಯ ಅಸ್ಸೊಟಿಕರರವರು ಕೇಳಿದಂತಹ ಪ್ರಶ್ನೆ ಏನಿದೆ. ರಿಕ್ರೂಟಮೆಂಟ್ ಆಗುವಂತಹ ಸಂದರ್ಭದಲ್ಲಿ ಇಂಟರವ್ಯೂ ಬಂದಂತಹ ಸಂದರ್ಭದಲ್ಲಿ ಭಟ್ಕಳದಲ್ಲಿ ಗಲಭೆಗಳು ನಡೆಯುತ್ತಿತ್ತು. ಆಗ ಕಾನೂನು ಸುವ್ಯವಸ್ಥೆಯಲ್ಲಿರಲಿಲ್ಲ, ಕರ್ಫ್ಯೂ ಇತ್ತು, ಅದರಿಂದಾಗಿ ರಿಕ್ರೂಟಮೆಂಟ್ ಅನ್ನು ಮುಂದಕ್ಕೆ ಹಾಕಿದರು. ಹೀಗಾಗಿ ಆಯ್ಕೆಯಾಗಲಿಲ್ಲ. ಮಾನ್ಯ ಗೌರವಾನ್ವಿತ ಸದಸ್ಯರ ಪ್ರಶ್ನೆ ಏನಿದೆ ಎಂದರೆ 79 ಜನರನ್ನು ಇಂಟರವ್ಯೂಗೆ 1993ರಲ್ಲಿ ಕರೆದರು. ಈಗ ಅವರಿಗೆ ವಯೋಮಿತಿ ಆಗಿ ಹೋಗಿದೆ. ವಯೋಮಿತಿಯನ್ನು 23ಕ್ಕೆ ಇಳಿಸಿದ್ದೀರಿ, ಅವರಿಗೆ ಏನು ಮಾಡುತ್ತಿರಿ ಎನ್ನುವುದು. ಅದಕ್ಕೆ ಏನು ಎಂಬುದರ ಬಗ್ಗೆ ಉತ್ತರ ಕೊಡಿ ಎಂದು ಕೇಳಿದ್ದಾರೆ. ಈಗ ಈ ಸರ್ಕಾರ ಬಂದಮೇಲೆ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡು ರೊಸ್ಟರ್ ಆರ್ಡರ್ ಅನ್ನು ಹೊರಡಿಸಿ ಎಲ್ಲೆಲ್ಲಿ ಕೊಲೆ ಸುಲಿಗೆ ಮತ್ತೊಂದು ಮಗದೊಂದು ಎಂದು ಎನು ಹೇಳಿದ್ದಾರೆ. ಇದನ್ನು ತಡೆಗಟ್ಟುವಂತಹ ದೃಷ್ಟಿಯಿಂದ ನಾವು ಇವತ್ತು ಎಲ್ಲಾ ರಿಕ್ರೂಟಮೆಂಟ್ ಮಾಡುವಂಥಾದ್ದಕ್ಕೆ ಸರ್ಕಾರ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದೆ. ಇದು ಜವಾಬ್ದಾರಿಯುತವಾದಂತಹ ಉತ್ತರವೆಂದು ಹೇಳುತ್ತೇವೆ. ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಂಥ ಕೊಲೆ, ಸುಲಿಗೆ ದರೋಡೆ, ಇದು ಉತ್ಪ್ರೇಕ್ಷೆಯ ಮಾತು. ಕಾನೂನು ಸುವ್ಯವಸ್ಥೆಯಿಂದಿದ್ದು, ಬಹಳ ಚೆನ್ನಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಕನಕಪುರ ತಾಲ್ಲೂಕಿನ ಕ್ರಿಮಿನಲ್ ಮೊಕದ್ದಮೆಗಳು.

88 - ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990 ರಿಂದ ಜೂನ್ 1995ರವರೆಗೆ ಐಪಿಸಿ 302ರಲ್ಲಿ ಎಷ್ಟು ಮೊಕದ್ದಮೆಗಳು ದಾಖಲಾಗಿದೆ. (ವರ್ಷವಾರು ವಿವರ ನೀಡುವುದು)?

ಆ) ಸಿ.ಒ.ಡಿ. ತನಿಖೆಗೆ ಎಷ್ಟು ಪ್ರಕರಣಗಳನ್ನು ನೀಡಲಾಗಿದೆ?

ಇ) ಎಷ್ಟು ಪ್ರಕರಣಗಳಿಗೆ ಚಾರ್ಜ್‌ಶೀಟ್ ಹಾಕಲಾಗಿದೆ

ಈ) ಎಷ್ಟು ಪ್ರಕರಣಗಳಿಗೆ 'ಬಿ' ವರದಿ ಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 8,159

1990	-	1402
1991	-	1370
1992	-	1493
1993	-	1503
1994	-	1445
1995	-	946
(ಜೂನ್ 95ರವರೆಗೆ)	-	8,159

ಆ) 466.

ಇ) 184.

ಈ) 152.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಅಧ್ಯಕ್ಷರೆ, ಕನಕಪುರ ತಾಲ್ಲೂಕಿನಲ್ಲಿ ನಡೆದ ಕೇಸಗಳ ದಾಖಲೆಯ ಬಗ್ಗೆ ನಾನು ಕೇಳಿದ್ದೆ. ಮಾನ್ಯ ಗೃಹ ಸಚಿವರು ರಾಜ್ಯದಲ್ಲಿ ಏನೇನಾಗಿದೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಮತ್ತೆ ಅವರು ನನ್ನನ್ನು ಪ್ರತ್ಯೇಕವಾಗಿ ಕರೆಸಿಕೊಂಡು ಕನಕಪುರದಲ್ಲಿ ಏನಾಗಿದೆ ಎಂಬುದರ ಮಾಹಿತಿಯನ್ನು ಕೊಟ್ಟಿದ್ದಾರೆ. ಇಲ್ಲಿ 57 ಕೇಸಗಳು ದಾಖಲೆಯಾಗಿದೆ ಎಂದು ಹೇಳಿದ್ದಾರೆ. ಎರಡು ಕೇಸ್ ಸಿ.ಓ.ಡಿ.ಗೆ ಒದಗಿಸಲಾಗಿದೆ. ಈ ಎರಡು ಕೇಸಗಳಲ್ಲಿ (ಬಿ) ರಿಪೋರ್ಟ್. ಅನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಇನ್ನು ಬಾಕಿ 8 ಕೇಸಗಳು ಏನಾಗಿದೆ ಎಂಬುದನ್ನು ಇಲ್ಲಿ ತಿಳಿಸಿಲ್ಲ. ದಯಮಾಡಿ ಗೃಹಸಚಿವರು ಇನ್ನು ಉಳಿದ ಎಂಟು ಕೇಸಗಳು ಯಾವ ಹಂತದಲ್ಲಿದೆ ಎಂಬುದನ್ನು ತಿಳಿಸಬೇಕು. ಮತ್ತೆ ನಾನು ಎರಡು ಕೇಸಗಳನ್ನು ಸಿ.ಓ.ಡಿ.ತನಿಖೆ ನಡೆಸಬೇಕೆಂದು ಹೇಳಿದ್ದೆ. ಸಾತನೂರು ಸ್ಟೇಷನ್ ವ್ಯಾಪ್ತಿಯ ಕ್ರೈಮ್ ನಂ. 124/95 ಮತ್ತು ಕನಕಪುರದ ಸ್ಟೇಷನ್ ವ್ಯಾಪ್ತಿಯ ಗೋಪಾಲ್ ನಾಯಕ್ ಒಬ್ಬ ಮುಖಂಡರ ಮೇಲೆ ಮೊಕದ್ದಮೆ ಇದನ್ನು ಸಿ.ಓ.ಡಿ. ತನಿಖೆ ನಡೆಸಬೇಕೆಂದು ಮನವಿ ಮಾಡಿಕೊಂಡಿದ್ದೆ. ಆದುದರಿಂದ ಈ ಎರಡನ್ನು ಸಿ.ಓ.ಡಿ. ತನಿಖೆಗೆ ಹಾಕಿದ್ದಾರೋ ಅಥವಾ ಇಲ್ಲಮೋ ಎಂಬುದನ್ನು ತಿಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದಿರುವಂತಹ ಕ್ರಿಮಿನಲ್ ಮೊಕದ್ದಮೆಗಳು ಐ.ಪಿ.ಸಿ. 302ರ ಪ್ರಕಾರ ಕನಕಪುರ ತಾಲ್ಲೂಕನಲ್ಲಿ ವಿಶೇಷವಾಗಿ ಆಗಿರುವಂಥ

1990ರಿಂದ ಇದುವರೆಗೂ ಆಗಿರುವಂಥ ಎಲ್ಲಾ ಮಾಹಿತಿಗಳನ್ನು ಸನ್ಮಾನ್ಯ ಸದಸ್ಯರಿಗೆ ನಾನು ಕೊಟ್ಟಿದ್ದೇನೆ. ಇನ್ನು ಎಂಟು ಕೇಸಗಳಲ್ಲಿ ಛಾರ್ಜ ಸೀಟ್ ಎನಕ್ವರಿಯ ಸ್ಟೇಜ್‌ನಲ್ಲಿದೆ ಎನ್ನುವಂಥಾದ್ದನ್ನು ಹೇಳಿ, ಅವರು ಹೇಳಿದಂತಹ ಎರಡು ಸ್ಪೆಸಿಫಿಕ್ ಕೇಸ್‌ಗಳು ಏನಿದೆ ಅದರ ಬಗ್ಗೆ ಖಚಿತವಾದ ಮಾಹಿತಿ ನನ್ನ ಹತ್ತಿರವಿಲ್ಲ. ಈ ಕೇಸಗಳ ಬಗ್ಗೆ ಡಿಟೈಲಗಳನ್ನು ಗೌರವಾನ್ವಿತ ಸದಸ್ಯರಿಗೆ ತರಿಸಿ ಒದಗಿಸಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಸಿ.ಆರ್. ಲಕ್ಷ್ಮಯ್ಯನವರ ಪ್ರಶ್ನೆ : 89: (1592)ನ್ನು ತಡೆ ಹಿಡಿದಿದ್ದೇನೆ. ದಿನಾಂಕ : 11ನೇ ಆಗಸ್ಟ 1995ರಂದು ಉಪಾವೇಶನವಿಲ್ಲದೆ ಇದ್ದ ಕಾರಣ ಆ ದಿನಕ್ಕೆ ಗೊತ್ತುಪಡಿಸಿದ್ದ ಸದನದಲ್ಲಿ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 15 ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿನ 27 ಪ್ರಶ್ನೆಗಳ ಪೈಕಿ 15 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ದಿನಾಂಕ 21ನೇ ಆಗಸ್ಟ 1995ರ ಪ್ರಶ್ನೋತ್ತರ ನಡೆಯದ ಕಾರಣ ಆ ದಿನದ 5ನೇ ಪಟ್ಟಿಯಲ್ಲಿದ್ದ ಚುಕ್ಕೆ ಗುರುತಿನ 15 ಪ್ರಶ್ನೆಗಳನ್ನು ಚುಕ್ಕೆ ಗುರುತಿಲ್ಲದ 68 ಪ್ರಶ್ನೆಗಳ ಪೈಕಿ 62 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶಿಗ್ಗಾಂವ್ - ಸವಣೂರು ನೀರಿನ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಭೂಸ್ವಾಧೀನ ಪಡಿಸಿಕೊಂಡು ಜಮೀನುಗಳಿಗೆ ಪರಿಹಾರ.

47 - ಶ್ರೀ ಮಂಜುನಾಥ. ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ಸವಣೂರು, ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಕೆ.ಯು.ಡಬ್ಲೂ.ಎಸ್. ಇಲಾಖೆಯ ವತಿಯಿಂದ ನಾಗನೂರು ಕೆರೆ ಆಳ ಮಾಡಲು ಎಷ್ಟು ಜಮೀನುಗಳನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಆ) ಸದರಿ ಜಮೀನು ಭೂ ಸ್ವಾಧೀನ ಪಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ನೋಟೀಸು ಕೊಡಲಾಗಿದೆಯೇ?

ಇ) ಇಲ್ಲವಾದರೆ ನೋಟೀಸ್ ನೀಡಲು ಆದ ವಿಳಂಬಕ್ಕೆ ಕಾರಣಗಳೇನು?

ಈ) ಸಂಬಂಧಪಟ್ಟವರಿಗೆ ಭೂ ಪರಿಹಾರ ಕೊಡಲಾಗಿದೆಯೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ) :

ಅ) 6 ಎಕರೆ 36 ಗುಂಟೆ ಮೀನನನ್ನು ಸ್ವಾಧೀನ ಪಡಿಸಿಕೊಳ್ಳಲು ಉಪವಿಭಾಗಾಧಿಕಾರಿಗಳು (ಸಾವನೂರು) 4 (1) ಅಧಿಸೂಚನೆ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

ಆ) ಇಲ್ಲ.

ಇ) ಮಂಡಲಿಯಲ್ಲಿ ಹಣದ ಕೊರತೆ ಇದ್ದಿದ್ದರಿಂದ ಉಪವಿಭಾಗಾಧಿಕಾರಿರವರಿಗೆ ಮಂಡಲಿಯು ಹಣ ಪಾವತಿ ಮಾಡಲು ವಿಳಂಬ ಆಗಿದೆ.